– ಬದುಕಿನ ಕಷ್ಟಗಳನ್ನು ಎರಡು ರೀತಿಯಲ್ಲಿ ಎದುರಿಸಬಹುದು. ಒಂದು, ಅವುಗಳ ಜೊತೆಯಲ್ಲಿ ಮುಖಾಮುಖಿಯಾಗಿ ನಿಂತು ಹೋರಾಡುವುದು. ಇಲ್ಲ, ಅವುಗಳನ್ನು ಸಂಪೂರ್ಣ ಉಪೇಕ್ಷೆ ಮಾಡುವುದು. ಸಮಸ್ಯೆ ಇಲ್ಲವೆಂದೇ ಭಾವಿಸಿ ಮುನ್ನಡೆಯುವುದು. ಜೊತೆಗೆ ಅರಿವಾಗಲಿತ್ತು, ಉಪೇಕ್ಷೆ ಮಾಡಲಾರದ ಸಮಸ್ಯೆಗಳು ಎದುರು ನಿಂತಾಗ, ಹೋರಾಟವೊಂದೇ ಮಾರ್ಗ.

ಈ ಸೈಕಲ್ ಪ್ರವಾಸ ಅಮ್ಮನ ವಿಚಾರಗಳೆಲ್ಲ ಬರೀ ಪುಸ್ತಕದ ಸಿದ್ಧಾಂತಗಳಲ್ಲ, ಬದುಕಿನ ಸತ್ಯಗಳು ಎನ್ನುವುದನ್ನು ಭಾವೇಶ್ ಅವರ ಅನುಭವಕ್ಕೆ ತಂದಿತ್ತು. ಇರುವ ಸಣ್ಣದೋ ಪುಟ್ಟದೋ ಸಮಸ್ಯೆಯನ್ನು ಬೆಟ್ಟವಾಗಿಸುವುದು ಏಕೆ? ಬೆಟ್ಟವನ್ನು ಪುಟ್ಟ ಗುಪ್ಪೆಯಾಗಿಸೋಣ. ಇದೇ ತತ್ತ್ವ ಅವರ ಬದುಕಿಗೆ ದಾರಿ ದೀಪವಾಯಿತು. ಆದರೆ ಬದುಕು ಪರೀಕ್ಷೆ ಮಾಡಲೆಂದೇ ಇವರತ್ತ ಅಸಾಧ್ಯದ ನೋವುಗಳನ್ನು ಒಗೆಯಲಿತ್ತು. ಒಂದು ರೀತಿ ಈ ಯಾತ್ರೆ ಭಾವೇಶ್ ಅವರಿಗೆ ಭವಿಷ್ಯದ ಸಂಘರ್ಷಪೂರ್ಣ ಬದುಕಿನ ಹೋರಾಟಕ್ಕೆ ಹಾಕಿದ್ದ ಬಲಿಷ್ಠವಾದ ಬುನಾದಿ ಕಲ್ಲಾಗಿತ್ತು.

ಭಾವೇಶ್ 'ಗೋಂದಿಯಾ ಎಜುಕೇಶನ್ ಸೊಸೈಟಿ'ಯ ನಟವರ್‌ಲಾಲ್ ಮಾನಿಕ್‌ಲಾಲ್ ದಲಾಲ್ (ಎನ್.ಎಮ್.ಡಿ.) ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿಯೇ ಓದಿ ಪದವೀಧರರಾದರು. ಎಂ.ಎ. ಎಕನಾಮಿಕ್ಸ್ ಮಾಡಲು ಬಯಸಿದರು. ಅರ್ಥಶಾಸ್ತ್ರ ಅವರಿಗೆ ಇಷ್ಟವಾದ ವಿಷಯವಾಗಿತ್ತು. ಎಂಟನೇ ತರಗತಿಯಿಂದಲೇ ಅರ್ಥಶಾಸ್ತ್ರದ ವಿಷಯವನ್ನು ಕಲಿಸುತ್ತಿದ್ದರು. ನ್ಯಾಷನಲ್ ಅಸೋಸಿಯೇಶನ್ ಫಾರ್ ದಿ ಬ್ಲೈಂಡ್‌ನಲ್ಲಿ (ಎನ್.ಎ.ಬಿ.) ಇದ್ದ ಎಂ.ಎ. ಪಠ್ಯದ ಆಡಿಯೊ ಕ್ಯಾಸೆಟ್‌ಗಳು ಬಹಳ ಉಪಯೋಗಕ್ಕೆ ಬಂದಿದ್ದವು. ಕೇಳಿ ಕೇಳಿ ಅಭ್ಯಾಸ ಮಾಡುತ್ತಿದ್ದರು. 60 ನಿಮಿಷ ಮತ್ತು 90 ನಿಮಿಷಗಳ ಕ್ಯಾಸೆಟ್‌ಗಳ ಕಾಲವದು. ಮೊದಲಿಗೆ ಎಕನಾಮಿಕ್ಸ್, ನಂತರ ಸೈಕಾಲಜಿ ವಿಷಯಗಳಲ್ಲಿ ಎಂ.ಎ. ಪಡೆಯುವುದು ಅವರ ಗುರಿಯಾಗಿತ್ತು.

ಸೈಕಲ್ ಯಾತ್ರೆಯಿಂದ ಹಿಂತಿರುಗಿದ ನಂತರ ಸುಮಾರು ಒಂದು ತಿಂಗಳ ಕಾಲ ಭಾವೇಶ್ ಜಾಂಡೀಸ್ ಬಂದು ತುಂಬಾ ಕಾಯಿಲೆ ಬಿದ್ದರು. ಅತ್ತ ತಂದೆಯ ಸ್ಕಿಜೊಫ್ರೇನಿಯಾಕ್ಕೆ ಚಿಕಿತ್ಸೆ ಬಾಂಬೆಯಲ್ಲಿ ನಡೆಯುತ್ತಿತ್ತು. ಅವರ ಸ್ಥಿತಿಯಲ್ಲಿ ಸಾಕಷ್ಟು ಸುಧಾರಣೆ ಕಂಡಿತ್ತು. ಇದರ ನಡುವೆ ಕುಟುಂಬದ ಓರ್ವ ಪರಿಚಿತರು ಮಹಾಬಲೇಶ್ವರದ 'ಭಾಟಿಯಾ ಆರೋಗ್ಯ ಭವನ'ದಲ್ಲಿ ಮ್ಯಾನೇಜರ್ ಆಗಿದ್ದರು. ಅವರಿಗೀಗ 86 ವರ್ಷ ವಯಸ್ಸು. ಅವರು ಕೆಲಸವನ್ನು ಬಿಡಲು ಬಯಸಿದ್ದರು. ಅವರಿಗೆ ಯಾರಾದರೂ ವಿಶ್ವಾಸಾರ್ಹ ವ್ಯಕ್ತಿಯನ್ನು ಸೂಚಿಸುವಂತೆ ಟ್ರಸ್ಟ್ ಕೇಳಿಕೊಂಡಿತ್ತು. ಆ ಟ್ರಸ್ಟ್ ಕಚ್ ಮೂಲದ ಭಾಟಿಯ ಸಮಾಜದ್ದಾಗಿತ್ತು. ಆರ್.ಕೆ. ವಾಡಿ ಎಂದು ಕರೆಯುತ್ತಿದ್ದ 'ರಣಛೋಡ್ದಾಸ್ ಕಾಂಜೀ ಚಾರಿಟೆಬಲ್ ಟ್ರಸ್ಟ್' ಕಳೆದ ಅನೇಕ ದಶಕಗಳಿಂದ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿತ್ತು. ಅನೇಕ ರಾಜ್ಯಗಳ ಧಾರ್ಮಿಕ ಸ್ಥಳಗಳಲ್ಲಿ ಟ್ರಸ್ಟಿನ ಆರೋಗ್ಯ ಭವನಗಳಿದ್ದವು. ಟ್ರಸ್ಟ್‌ನ ಒಂದು ಕಚೇರಿ ಬಾಂಬೆಯಲ್ಲಿಯೂ ಇದ್ದಿತು. ಆ ಪರಿಚಿತ ವ್ಯಕ್ತಿ ತನ್ನ ಜಾಗಕ್ಕೆ ಭಾವೇಶ್ ಅವರ ತಂದೆಯ ಹೆಸರನ್ನು ಟ್ರಸ್ಟ್‌ಗೆ ಸೂಚಿಸಿದರು. ತಂದೆಗೆ 650 ರೂಪಾಯಿಯ ವೇತನದ ಮೇಲೆ ತೆಗೆದುಕೊಳ್ಳುವ ಪ್ರಸ್ತಾವ ಮಾಡಿದರು. ಅದು ತೀರಾ ಕಡಿಮೆ ಸಂಬಳವಾಗಿತ್ತು. ಆದರೆ ಟ್ರಸ್ಟ್ ಕೆಲಸದ ಜೊತೆಯಲ್ಲಿ ಇರಲು ಒಂದು ಕೊಠಡಿಯನ್ನೂ ಕೊಡುವುದಾಗಿ ಹೇಳಿತು. ಹಗಲು ಇರುಳು ದುಡಿಯುತ್ತಿದ್ದ ತಂದೆಗೆ ಕೆಲಸ ಬಿಡಬೇಕಾಗಿ ಬಂದದ್ದೇ ಅವರ ಮಾನಸಿಕ ಕಾಯಿಲೆಗೆ ಮುಖ್ಯ ಕಾರಣವಾಗಿತ್ತು. ತಂದೆಯವರನ್ನು ಹೇಗಾದರೂ ಮತ್ತೆ ಕೆಲಸದಲ್ಲಿ ತೊಡಗಿಸುವ ಅಗತ್ಯವಿತ್ತು. ತಾಯಿ–ತಂದೆ ಇಬ್ಬರೂ ಹೊಸ ಬದುಕನ್ನು ಆರಂಭಿಸಲು ಬಯಸಿದ್ದರು. ಅವರ ಬಳಿ ಏನೇನೂ ಉಳಿತಾಯವಿರಲಿಲ್ಲ. ಗೋಂದಿಯಾದ ಅವರ ಕೆಲಸಕ್ಕೆ ಸಿಗುತ್ತಿದ್ದ ಸಂಬಳದಲ್ಲಿ ಮೂವರ ಬದುಕು ಸಾಗುವುದೇ ಕಷ್ಟದ್ದಾಗಿತ್ತು.

ಭಾವೇಶ್‌ರ ತಂದೆ–ತಾಯಿ ಇಬ್ಬರೂ ಡಿಸೆಂಬರ್ 3, 1988ರಂದು ಮಹಾಬಲೇಶ್ವರಕ್ಕೆ ಬಂದಿಳಿದರು. ಟ್ರಸ್ಟ್ ಇದ್ದ ಆರ್.ಕೆ.ವಾಡಿಯಲ್ಲಿ 17 ಬಂಗಲೆಗಳಿದ್ದವು. 1942ರಲ್ಲಿ ಈ ಜಾಗದ ನಿರ್ಮಾಣವಾಗಿತ್ತು. ಅದೇ ಪರಿಸರದಲ್ಲಿ ತಂದೆಗೆ 10 ಅಡಿ ಅಗಲ, 12 ಅಡಿ ಉದ್ದದ ಒಂದು ಕೋಣೆಯನ್ನು ವಾಸಕ್ಕೆ ಕೊಟ್ಟರು. ಹೊರಗೆ ತೆರೆದ ಒಂದಿಷ್ಟು ವರಾಂಡವಿತ್ತು. ಅವರ ಮುಖ್ಯ ಕೆಲಸ, ಬಾಂಬೆಯಿಂದ ಬುಕಿಂಗ್ ಆದ ಕೋಣೆಗಳನ್ನು ತಯಾರಾಗಿ ಇರಿಸುವುದು. ಅವರ ಕೈಕೆಳಗೆ ಓರ್ವ ಮಾಲಿ ಮತ್ತು ಕೋಣೆಗಳನ್ನು ಸ್ವಚ್ಛ ಮಾಡುವ ಓರ್ವ ಕೆಲಸಗಾರನಿದ್ದ. ಬಂಗಲೆಯಲ್ಲಿ ಅಡುಗೆ ಮನೆ ಇತ್ತು. ಬಂದವರು ಸುಮಾರು 15 ದಿನಗಳಿಂದ ಒಂದು ತಿಂಗಳವರೆಗೂ ಇರುತ್ತಿದ್ದರು. ತಂದೆ ಈ ಕೆಲಸವನ್ನು ಕೆಲವೇ ದಿನಗಳಲ್ಲಿ ಅರ್ಥ ಮಾಡಿಕೊಂಡು ಚೆನ್ನಾಗಿ ನಡೆಸತೊಡಗಿದರು.

ಇದೇ ಸಮಯದಲ್ಲಿ ಬಾಂಬೆಯ ಅಜ್ಜ (ತಾಯಿಯ ತಂದೆ), ಇವರ ಕಷ್ಟದ ಪರಿಸ್ಥಿತಿಯನ್ನು ಅರಿತಿದ್ದರು. ಮಗಳಿಗೆ ಒಂದು ದೊಡ್ಡ ಮೊತ್ತದ ಹಣವನ್ನು ಕಳುಹಿಸಿಕೊಟ್ಟರು. ಆ ಹಣದಿಂದ ತಾಯಿ ಮತ್ತು ತಂದೆ ಮಹಾಬಲೇಶ್ವರದ ಹತ್ತಿರವಿದ್ದ ಕೇಶರ್ ಗ್ರಾಮದಲ್ಲಿ 12 ಎಕರೆ ಜಮೀನನ್ನು ಖರೀದಿ ಮಾಡಿದರು. ಜಮೀನು ಪೂರ್ಣ ಬಂಜರಾಗಿತ್ತು. ಆದರೆ ಈ ಜಮೀನು, ತಮಗಿರುವ ಏಕಮಾತ್ರ ಪುತ್ರನಿಗೆ ನಾಳೆ ಕೆಲಸಕ್ಕೆ ಬರುತ್ತದೆ ಎಂಬ ಮುಂದಾಲೋಚನೆ ಅವರದಾಗಿತ್ತು. ಆತ ತನ್ನದೇನಾದರೂ ಉದ್ಯಮವನ್ನು ಆ ಜಾಗದಲ್ಲಿ ಆರಂಭಿಸುತ್ತಾನೆ ಎಂಬ ದೂರಾಲೋಚನೆ ಅವರದು.

ಬದುಕು ಹಳಿಗೆ ಬಂದಿತ್ತು. ಎಲ್ಲವೂ ಮತ್ತೆ ನೇರವಾಗಿ ನಡೆದಿತ್ತು. ತಂದೆ ತಮ್ಮ ಜವಾಬ್ದಾರಿಗಳನ್ನು ಹೊರಲು ಸಮರ್ಥರಾಗಿದ್ದರು. ಅವರ ಕೆಲಸವೇನೂ ಹೆಚ್ಚಿರಲಿಲ್ಲ. ಸುಲಭವಾಗಿ, ಸರಳವಾಗಿ ನಡೆದುಕೊಂಡು ಹೋಗುತ್ತಿತ್ತು. ತಾಯಿಯೂ ಕೆಲಸದಲ್ಲಿ ಸಹಾಯಕರಾಗಿದ್ದರು. ಗೋಂದಿಯಾದಿಂದ ಇಲ್ಲಿಗೆ ಬಂದ ಭಾವೇಶನಿಗೂ ಮಹಾಬಲೇಶ್ವರ ಬಹಳಷ್ಟು ಆಕರ್ಷಕವಾಗಿ ಕಂಡಿತು. ಅವರ ಐದನೇ ತರಗತಿಯ ಇಂಗ್ಲಿಷ್ ಪಠ್ಯಪುಸ್ತಕದಲ್ಲಿ ಮಹಾರಾಷ್ಟ್ರದ ಮಾಥೆರಾನ್ ಮತ್ತು ಮಹಾಬಲೇಶ್ವರ ಈ ಎರಡೂ ಪರ್ವತ ಪ್ರದೇಶಗಳ ಉಲ್ಲೇಖವಿತ್ತು. ಶ್ರೀಮಂತರು ಹವಾ ಬದಲಾವಣೆಗೆ, ಬೇಸಿಗೆಯ ರಜೆಗೆ ಮಹಾಬಲೇಶ್ವರಕ್ಕೆ ಬರುತ್ತಾರೆಂದು ಬರೆದಿತ್ತು. ಆ ಪಾಠವನ್ನು ಓದುವಾಗ, ತಾವು ಎಂದಾದರೂ ಇಂತಹ ಸುಂದರ ಸ್ಥಳವನ್ನು ನೋಡುತ್ತೇವೆಯೇ ಅನಿಸಿತ್ತು. ಆದರೆ ಈಗ ಬದುಕು ಅವರ ಬೆರಳು ಹಿಡಿದು ಮಹಾಬಲೇಶ್ವರಕ್ಕೆ ಕರೆ ತಂದಿತ್ತು. ಭಾವೇಶ್ ಅವರಿಗೆ ಎಲ್ಲಿಲ್ಲದ ಆನಂದ.

ಮಹಾಬಲೇಶ್ವರ ಭಾರತದ ಮಹಾರಾಷ್ಟ್ರ ರಾಜ್ಯದ ಸತಾರಾ ಜಿಲೆಯಲ್ಲಿರುವ ಸುಂದರ ಪರ್ವತ ಪ್ರದೇಶ. ಮುಂಬಯಿಯಿಂದ 265 ಕಿ.ಮೀ. ಹಾಗೂ ಪುಣೆಯಿಂದ 120 ಕಿ.ಮೀ. ದೂರದಲ್ಲಿದೆ. ಸತಾರಾ ನಗರದಿಂದ ಸುಮಾರು 60 ಕಿ.ಮೀ. ದೂರದಲ್ಲಿದೆ. ಸಮುದ್ರತಟದಿಂದ ಸುಮಾರು 4500 ಅಡಿ ಎತ್ತರದಲ್ಲಿರುವ ಮಹಾಬಲೇಶ್ವರದ ಬಜಾರ್ ರಸ್ತೆಯಂತೂ ಉದ್ದಕ್ಕೆ ಒಂದು ಕಿ.ಮೀ. ಹಾದು ಮಲಗಿದೆ. ಮಳೆಗಾಲದ ಮೂರು ತಿಂಗಳನ್ನು ಬಿಟ್ಟರೆ, ಈ ಬಜಾರ್ ಸೂರ್ಯ ಮುಳುಗಿದೊಡನೆ ಪ್ರವಾಸಿಗಳಿಂದ ತುಂಬಿ ತುಳುಕುತ್ತದೆ. ಮಹಾಬಲೇಶ್ವರದ ಒಂದು ದಿಕ್ಕಿಗೆ ಪ್ರತಾಪಗಢ್ ಕೋಟೆ ಇದೆ. 17ನೇ ಶತಮಾನದಲ್ಲಿ ಶಿವಾಜಿ ಮಹಾರಾಜರು ಕಟ್ಟಿಸಿದ ಕೋಟೆ ಚರಿತ್ರೆಯ ಪುಟಗಳಲ್ಲಿ ಅಮರವಾಗಿದೆ. ಇನ್ನೊಂದು ದಿಕ್ಕಿನಲ್ಲಿ ಬಲು ಪುರಾತನವಾದ ಶಿವನ ಮಂದಿರವಿದೆ. ಮಹಾಬಲೇಶ್ವರ ಕ್ಷೇತ್ರದಿಂದ ಆರಂಭವಾಗುವ ಕೃಷ್ಣಾ ನದಿಯ ದರ್ಶನವೂ ಆಗುತ್ತದೆ. ಪಾಂಡವರು ಇಲ್ಲಿಯ ಗುಹೆಗಳಲ್ಲಿ ವನವಾಸ ಮಾಡಿದರು ಎಂಬ ಪ್ರತೀತಿಯೂ ಇದೆ. ಬ್ರಿಟಿಷರು ಈ ಪುಟ್ಟ ಊರನ್ನು ಗಿರಿಧಾಮವಾಗಿ ವಿಕಾಸಗೊಳಿಸಿ, ತಮ್ಮ ಬಾಂಬೆ ಪ್ರೆಸಿಡೆನ್ಸಿಗೆ ಬೇಸಿಗೆಯ ರಾಜಧಾನಿಯಾಗಿ ಮಾಡಿಕೊಂಡಿದ್ದರು. ಕಾಡುಮೇಡು ಝರಿಗಳಿಂದ ತುಂಬಿರುವ ಈ ಪ್ರದೇಶ ಶತಮಾನಗಳಿಂದ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಾ ಬಂದಿದೆ. ಇಂತಹ ಸುಂದರ ಪ್ರದೇಶದ ನಿವಾಸಿಯಾಗುವ ಅವಕಾಶ ಭಾವೇಶ್ ಅವರಿಗೆ ಎಲ್ಲಿಲ್ಲದ ಖುಷಿ ಕೊಟ್ಟಿತು.

ಆದರೆ ಈ ಖುಷಿ ಹೆಚ್ಚು ಕಾಲ ಉಳಿಯಲಿಲ್ಲ. ಒಂದಿಷ್ಟು ಹಳಿಗೆ ಬಂದು ಸಮಾಧಾನದಿಂದ ಸಾಗಿದ್ದ ಕುಟುಂಬಕ್ಕೆ ಬರಸಿಡಿಲು ಎರಗಲಿತ್ತು. ಕಷ್ಟಗಳು ಭಾವೇಶ ಅವರ ಸೆರಗು ಬಿಡಲು ಸಿದ್ಧವಿರಲಿಲ್ಲ.

### ತಾಯಿಗೆ ಕ್ಯಾನ್ಸರ್; ಭಾವೇಶ್‌ಗೆ ಆಘಾತ

ಆಗ ಭಾವೇಶ್ ಪ್ರಥಮ ವರ್ಷದ ಎಂ.ಎ. ತರಗತಿಯಲ್ಲಿದ್ದರು. ಅರ್ಥಶಾಸ್ತ್ರದಲ್ಲಿ ಎಂ.ಎ. ಓದುತ್ತಿದ್ದ ಸಮಯ, ತಾಯಿಗೆ ಒಂದು ಬಗೆಯ ರಕ್ತದ ಕ್ಯಾನ್ಸರ್ ಇದೆ ಎಂದು ತಿಳಿದು ಬಂದಾಗ